OS 186/2021
ಪಿ ಡಬ್ಲೂ 1

ದಿನಾಂಕ 03.04.2024 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಹೆಚ್ ಪಿ ಜೆ ವಕೀಲರಿಂದಃ-

ನಾನು ಡಿಗ್ರಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಆಡಿಟರ್ ಆಗಿ ನಿವೃತ್ತಿ ಹೊಂದಿರುತ್ತೇನೆ. ದಾವಾದಲ್ಲಿ ಹಾಜರಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನೇ ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿನ ಮೂಲ ಮಾಲೀಕ ಸಿದ್ಲಿಂಗಪ್ಪ ಎಂದರೆ ಸಾಕ್ಷಿಯ ಖಾತೆ ಅವರ ಹೆಸರಿಗೆ ಇತ್ತು ಎನ್ನುತ್ತಾರೆ. ಸದರಿ ಸಿದ್ಲಿಂಗಪ್ಪ ನಮಗೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ. ನನ್ನ ತಂದೆ ಕಂತೆಪ್ಪ ಮತ್ತು ಕೆಂಚಪ್ಪ ಎನ್ನುವವರು ಇಬ್ಬರೂ ಸೇರಿ 1966 ರಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಕೆಂಚಪ್ಪ ಸಹ ಸಿದ್ಲಿಂಗಪ್ಪರವರಿಂದ ದಾವಾ ಸ್ವತ್ತನ್ನು ಖರೀದಿ ಮಾಡಿಲ್ಲ ಎಂದರೆ ಸರಿ.

2. ದಾವಾ ಸ್ವತ್ತಿನ ಸರ್ವೆ ನಂಬರ್ 42/1 ಎಂದರೆ ಸಾಕ್ಷಿಯು 46/1 ಎನ್ನುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸ. ನಂ. 46/1 ವತ್ತು ವಿಸ್ತೀರ್ಣ 1 ಎಕರೆ 19 ಗುಂಟೆ ಎನ್ನುತ್ತಾರೆ. 1984 ರಲ್ಲಿ ದಾವಾ ಸ್ವತ್ತಿನ ಫಹಣಿ ಸಿದ್ಲಿಂಗಪ್ಪರವರ ಹೆಸರಿಗೆ ಇತ್ತು ಕಾರಣ ಸ್ವತ್ತಿನ ಕಬ್ಜೆ ಸಿದ್ಲಿಂಗಪ್ಪರವರ ಬಳಿ ಇತ್ತು ಎಂದರೆ ಸರಿಯಲ್ಲ. ಕಬ್ಜೆ ನಮ್ಮ ಬಳಿ ಇತ್ತು. 1950 ರಿಂದಲೂ ಸಿದ್ಲಿಂಗಪ್ಪರವರೇ ದಾವಾ ಸ್ವತ್ತಿನ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು 1966 ರಿಂದ ನಾವು ಸಾಗುವಳಿ ಮಾಡುತ್ತಿದ್ದೇವೆ ಎನ್ನುತ್ತಾರೆ. ಅದೇ ಕಾರಣದಿಂದ ಸಿದ್ಲಿಂಗಪ್ಪರವರ ಹೆಸರಿಗೆ ಫಹಣಿ ಬರುತ್ತಿತ್ತು ಎಂದರೆ ಸರಿಯಲ್ಲ. ಕೈ ಫಹಣಿ ನಮ್ಮ ಹೆಸರಿಗೆ ಇತ್ತು.

3. ಸಿದ್ಲಿಂಗಪ್ಪರವರ ನಂತರ ಅವರ ದತ್ತು ಮಗ ಗವಿಯಪ್ಪನ ಹೆಸರಿಗೆ ಫಹಣಿ ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆ ಹೆಸರಿಗೆ ಫಹಣಿ ಬಂದಿರುತ್ತದೆ. 1999-2000 ರವರೆಗೆ ಗವಿಯಪ್ಪನ ಹೆಸರಿಗೆ ಫಹಣಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕಂದಾಯ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ನಮಗೆ ನೋಟಿಸ್ ಕೊಡದೇ ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ.

ಗವಿಯಪ್ಪರವರು ತನ್ನ ಮಗ ಮಾಲತೇಶ ಅಂದರೆ ಪ್ರತಿವಾದಿಯ ಹೆಸರಿಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ನ ಪ್ರಕಾರ ಪ್ರತಿವಾದಿ ಹೆಸರಿಗೆ ಖಾತೆ ಫಹಣಿ ಬದಲಾಗಿ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿರುತ್ತೇವೆ. 2000 ನೇ ಸಾಲಿನಲ್ಲಿ ಪ್ರತಿವಾದಿ ಹೆಸರಿಗೆ ಖಾತೆ ಫಹಣಿ ಬದಲಾಗಿರುವ ಬಗ್ಗೆ ಗೊತ್ತಿಲ್ಲ. ನಾನು ಏ. ಸಿ ನ್ಯಾಯಾಲಯದಲ್ಲಿ ಆರ್ ಎ 28/2021 ನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ನಾನು ಪ್ರಭಾವ ಬೀರಿ ತಡೆಯಾಜ್ಞೆ ತಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ದೀರ್ಘಕಾಲದ ಸ್ವಾಧೀನವನ್ನು ತಪ್ಪಿಸುವ ಉದ್ದೇಶದಿಂದ ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಏ ಸಿ ನ್ಯಾಯಾಲಯದಲ್ಲಿ ತಡೆಯ್ಞಾಜ್ಞೆ ತಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತಡೆಯಾಜ್ಞೆಯ ಆಧಾರದ ಮೇಲೆ ಈ ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರ್ ಏ ವಜಾ ಆಗಿರುತ್ತದೆ ಎಂದರೆ ಸರಿ.

4. ಸದರಿ ಆರ್ ಎ ಸಂಖ್ಯೆ 28/2021 ರಲ್ಲಿ 4 ಎಮ್ ಆರ್ ಗಳನ್ನು ಪ್ರಶ್ನಿಸಿದ್ದೇನೆ ಎಂದರೆ ಸರಿ. ನಿಪಿ 6 ಕ್ರಯಪತ್ರದ ಪ್ರಕಾರ ಒಟ್ಟು 1 ಎಕರೆ 37 ಗುಂಟೆಯನ್ನು ಜಂಟಿಯಾಗಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ಎಮ್ ಕೆ ಸುರೇಶ ಎನ್ನುವವರ ತಂದೆಯ ಹೆಸರು ಕೆಂಚಪ್ಪ ಎಂದರೆ ಸರಿ. ನಿಪಿ 6 ರಲ್ಲಿರುವ ಖರೀದಿದಾರರು ಸದರಿ ಕೆಂಚಪ್ಪ ಎಂದರೆ ಸರಿ. ಸದರಿ ಕೆಂಚಪ್ಪ ಇವರು ಇದೇ ನ್ಯಾಯಾಲಯದಲ್ಲಿ ಅ. ದಾ. 176/2022 ನ್ನು ಇಂಜಂಕ್ಷನ್ ಗಾಗಿ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಕೆಂಚಪ್ಪರವರ ಪರವಾಗಿ ಇಂಜಂಕ್ಷನ್ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ಎಮ್ ಎ. 30/2023 ನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

5. ಈ ದಾವೆಯಲ್ಲಿ ಪ್ರತಿವಾದಿಯು ನನ್ನ ವಿರುದ್ಧ ಕೊಡಲಾಗಿ ತಾತ್ಕಾಲಿಕ ನಿರ್ಭಧಕಾಜ್ಞೆಯ ಆದೇಶದ ವಿರುದ್ಧ ಎಮ್ ಎ 18/2022 ನ್ನು ಸಲ್ಲಿಸಿದ್ದಾರೆ ಎಂದರೆ

ಸರಿ. ಸದರಿ ಎಮ್ ಎ 18/2022 ಪುರಸ್ಕಾರಗೊಂಡಿರುತ್ತದೆ ಎಂದರೆ ಸರಿ. ನಾನು ಅದಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಅವಶ್ಯವಿದ್ದಲ್ಲಿ ಹಾಜರಪಡಿಸುತ್ತೇನೆ. ಸದರಿ ಖರೀದಿ ಪತ್ರದ ಆಧಾರದ ಮೇರೆಗೆ ನನ್ನ ತಂದೆ ಅಥವಾ ಕೆಂಚಪ್ಪ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಪ್ರಯತ್ನಿಸಿಲ್ಲ ಎಂದರೆ ಸಾಕ್ಷಿಯು ಕೆಂಚಪ್ಪರವರ ಬಗ್ಗೆ ಗೊತ್ತಿಲ್ಲ, ಆದರೆ ನನ್ನ ತಂದೆ ಹೆಸರಿಗೆ 1983-84 ನೇ ಸಾಲಿನವರೆಗೂ ಫಹಣಿ ಇತ್ತು ಎನ್ನುತ್ತಾರೆ.

6. ನನ್ನ ತಂದೆ ಮತ್ತು ಕೆಂಚಪ್ಪ ಖರೀದಿ ಕಾಲಕ್ಕೆ ಖರೀದಿ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಖರೀದಿ ಹಣ ಕೊಟ್ಟಿರದ ಕಾರಣ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನಾಗೇಂದ್ರಪ್ಪ ಎಂದರೆ ನನ್ನ ಸ್ವಂತ ಅಣ್ಣ. ಅವರು ನಿಧನ ಹೊಂದಿ 25 ವರ್ಷವಾಗಿರುತ್ತದೆ. ನಾಗೇಂದ್ರಪ್ಪ ರವರು ನನ್ನ ತಂದೆ ಹೆಸರಿಗೆ ಸ. ನಂ. 42 ರ ಪೈಕಿ ದಕ್ಷಿಣದ 1 ಎಕರೆ ಖುಷ್ಕಿ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾಹಿತಿ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಸ್ವತ್ತಿನ ಚಕ್ಕುಂಬದಿಯನ್ನು ಖರಾಬು ಜಮೀನು 4 ಗುಂಟೆಯನ್ನು ಸೇರಿಸಿ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ 4 ಗುಂಟೆ ಖರಾಬು ಜಮೀನನ್ನು ಬಿಟ್ಟರೂ ಸಹ ದಾವಾ ಸ್ವತ್ತಿನ ಚಕ್ಕುಬಂದಿ ವಾದಪತ್ರದಲ್ಲಿ ನಮೂದಿಸಿರುವಂತೆ ಅಂದರೆ ಪೂರ್ವಕ್ಕೆ - ಚನ್ನಬಸಪ್ಪರವರ ಜಮೀನು, ಪಶ್ಚಿಮಕ್ಕೆ - ಗ್ರಾಮಠಾಣಾ, ಉತ್ತರಕ್ಕೆ- ಜಯಪ್ಪರವರ ಸ್ವತ್ತು, ದಕ್ಷಿಣಕ್ಕೆ- ಆನಂದಪ್ಪರವರ ಜಮೀನು ಇರುತ್ತದೆ. 4 ದಿಕ್ಕಿನಲೂ ಖರಾಬು ಜಮೀನನ್ನು ತೋರಿಸಿಲ್ಲ ಎಂದರೆ ಸಾಕ್ಷಿಯು ಜಮೀನಿನ ಅಂಚಿನಲ್ಲಿ ಇರಬಹುದು ಎನ್ನುತ್ತಾರೆ.

8. ಸಿದ್ಲಿಂಗಪ್ಪರವರ ನಂತರ ದಾವಾ ಸ್ವತ್ತಿನ ಖಾತೆ ಗವಿಯಪ್ಪ ಅವರ ನಂತರ ಮಾಲತೇಶಪ್ಪರವರ ಹೆಸರಿಗೆ ಇರುವುದನ್ನು ನಾನು ಎಂದಿಗೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ನಾನು ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದೆ, 2006 ರ ನಂತರ ನನಗೆ ಸದರಿ ಖಾತೆ ಬದಲಾದ ಬಗ್ಗೆ ತಿಳಿಯಿತು ಎನ್ನುತ್ತಾರೆ. ನಾನು 2016 ರಲ್ಲಿ ನಿವೃತ್ತಿ

ಹೊಂದಿರುತ್ತೇನೆ ಆ ವರಗಗೂ ನನಗೆ ಖಾತೆ ಬದಲಾದ ಬಗ್ಗೆ ಗೊತ್ತಿರಲಿಲ್ಲ ಆದ್ದರಿಂದ ಖಾತೆ ಬದಲಾದ ಬಗ್ಗೆಪ್ರಶ್ನಿಸಿರುವುದಿಲ್ಲ.

9. ದಿನಾಂಕ 09.08.2021 ರಂದು ವಾದಿಯು ದಾವಾ ಸ್ವತ್ತಿಗೆ ಬಂದು ನನ್ನ ಕಬ್ಜೆಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 50-60 ವರ್ಷಗಳಿಂದ ಪ್ರತಿವಾದಿಯರೇ ಕಬ್ಜೆಯಲ್ಲಿದ್ದರೂ ಸಹ ಸುಳ್ಳು ವ್ಯಾಜ್ಯ ಕಾರಣ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸ. ನಂ. 42/1 ರಲ್ಲಿ 1 ಎಕರೆ 4 ಗುಂಟೆ ಗೆ ದಾವೆ ಸಲ್ಲಿಸಿದ್ದು, ಆದರೆ ಫಹಣಿ 1 ಎಕರೆ 19 ಗುಂಟೆ ಇರುತ್ತದೆ ಎಂದರೆ ಸರಿ. ಅದರಲ್ಲಿ ಹೆಚ್ಚಿನ ವಿಸ್ತೀರ್ಣದ ಜಮೀನು ಕೆಂಚಪ್ಪರವರಿಗೆ ಸೇರಿದ್ದು ಇರಬಹುದು ಎನ್ನುತ್ತಾರೆ. ಕೆಂಚಪ್ಪ ಇವರು 19 ಗುಂಟೆಗೆ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಈ ದಾವೆಯ ಸ್ವತ್ತು 1 ಎಕರೆ 4 ಗುಂಟೆ ಮತ್ತು ಕೆಂಚಪ್ಪ ಸಲ್ಲಿಸಿದ 19 ಗುಂಟೆಯನ್ನು ಸೇರಿಸಿದ್ದಲ್ಲಿ 1 ಎಕರೆ 23 ಗುಂಟೆ ಆಗುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ, ಫಹಣಿ ಪ್ರಕಾರ ನನ್ನ ಜಮೀನಿಗೆ ದಾವೆ ಮಾಡಿದ್ದೇನೆ ಎನ್ನುತ್ತಾರೆ. ನಮ್ಮ ತಂದೆಯವರಾಗಲಿ, ನಾನಾಗಲೀ ಜಮೀನನ್ನು ಪೋಡಿ ಮಾಡಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ.

10. ಪ್ರತಿವಾದಿಯರು ದಾವಾ ಸ್ವತ್ತಿನ ಮೇಲೆ ಸಾಲ ಪಡೆದುಕೊಂಡು ಜಮೀನನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಫಹಣಿ ಪತ್ರಿಕೆಯನ್ನು ನೋಡಿದ ನಂತರ ದಾವೆ ಮಾಡಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಫಹಣಿ ಪತ್ರಿಕೆಯಲ್ಲಿ ಸ್ವತ್ತಿನ ಮೇಲೆ ಸಾಲ ಪಡೆದುಕೊಂಡ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಯಾರೂ ಸಾಲ ಪಡೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತನ್ನು ನನ್ನ ತಂದೆ ಮೂಲ ಮಾಲೀಕರಿಂದ ಖರೀದಿ ಮಾಡದ ಕಾರಣ ನನಗೆ ಯಾವುದೇ ಕಬ್ಜೆ ಅಥವಾ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಸ್ವತ್ತಿಗೆ ತೊಂದರೆ ಕೊಡಲು ಪ್ರಯತ್ನಿಸಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಯಾವತ್ತಿಗೂ ಭೇಟಿ ಕೊಟ್ಟಿಲ್ಲ, ನಾನು ಹೇಳುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

11. ನಿಪಿ 8 ರಲ್ಲಿ ನಮೂದಿಸಿರುವ ಮಾಹಿತಿ ಸುಳ್ಳು ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಚೌಟಗಿ ಬಸವ್ವ ಕೋಂ ನಿಂಗಪ್ಪ ಮತ್ತು ಅವರ ದತ್ತು ಮಗ ಗವಿಯಪ್ಪ ಇವರು ಸದರಿ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದು ನಮೂದು ಇದ್ದು, ಆದರೆ ನಿಪಿ 8 ರಲ್ಲಿ ಸಿದ್ಲಿಂಗಣ್ಣನ ಮಗ ಸಿದ್ಲಿಂಗಪ್ಪ ಇವರು ಮಾರಾಟ ಮಾಡಿದ್ದಾರೆ ಎಂದು ನಮೂದು ಇರುವ ಕಾರಣ ನಿಪಿ 8 ಸರಿಯಾದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರದೇ ಇದ್ದರೂ ಸಹ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಇಂಜಂಕ್ಷನ್ ಆದೇಶ ಪಡೆದುಕೊಂಡು ಪೋಲಿಸರ ಸಹಾಯದಿಂದ ಪ್ರತಿವಾದಿಯನ್ನು ಹೊರ ಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರನ್ನು ದಾವಾ ಜಮೀನಿನಿಂದ ಹೊರಹಾಕಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ ಪಂಗಡದ ಜನರನ್ನು ನಾನು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಚನ್ನಬಸಪ್ಪರವರ ಮೂಲಕ ಪ್ರತಿವಾದಿಯರ ಮೇಲೆ ದೌರ್ಜನ್ಯ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ದಾವಾ ಸ್ವತ್ತಿನ ಕಬ್ಜೆ ತಪ್ಪಿಸಲು ಪೋಲಿಸ್ ಠಾಣೆಯಲ್ಲಿ ಮತ್ತು ಏ. ಸಿ ನ್ಯಾಯಾಲಯದಲ್ಲಿ ಪ್ರಭಾವ ಬೀರಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ. ಓ.ಹೇ.ಕೇ.ಸರಿಯಿದೆ.

(ತೆ.ನ್ಯಾಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.